ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಬೊಕ್ಕ ತಲೆಯನ್ನು ಕ್ರಿಕೆಟ್ ಫೀಲ್ಡ್‌ಗೆ ಹೋಲಿಸುವುದೇಕೆ?



ಸೆಂಟರ್ ಪಿಚ್‌ನಲ್ಲಿ ಒಂದೇ ಒಂದು ಹುಲ್ಲೂ ಇರುವುದಿಲ್ಲವಾದ್ದರಿಂದ.

ಹೆಚ್.ವಿ. ಶ್ರೀಧರ್, ಬೆಂಗಳೂರು
'ಉಚಿತ ವಿದ್ಯುತ್' ಭಾಗ್ಯ ಇರುವ ಮನೆಗೆಲ್ಲ ಆಗಾಗ್ಗೆ ಲೋಡ್ ಶೆಡ್ಡಿಂಗ್ ಮಾಡಿದರೆ ಖರ್ಚು ಕಡಿಮೆಯಾಗುತ್ತಲ್ಲವೆ?
ಊಹೂಂ. ಆಗ ಅಕ್ಕಿಯ ಬದಲು ದುಡ್ಡು ತೆತ್ತಂತೆ ಕರೆಂಟಿನ ಬದಲೂ ತೆರಬೇಕಾಗುತ್ತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಪಕ್ಷದವರ ಪಾದಯಾತ್ರೆ ಹೆದ್ದಾರಿಯನ್ನು ಬಿಟ್ಟು ಅಡ್ಡದಾರಿಯಲ್ಲಿ ಹೋದರೆ?
ಅದು ಅವರ ಚಿಂತನೆಗೆ ಹೊಂದಾಣಿಕೆ ಆಗುತ್ತದೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಎಲ್ಲರೂ ಮೊಬೈಲ್ ದಾಸರಾಗಿರುವ ಈ ದಿನಗಳಲ್ಲಿ 'ನನಗೆ ಮೊಬೈಲ್ ಬೇಡ' ಎನ್ನುವವನಿಗೆ ನಿಮ್ಮ ಉತ್ತರ?



ಓಹ್! ಈಗಷ್ಟೇ ಕಣ್ಣಾಪ್ರೇಷನ್ ಆಗಿರ್ಬೇಕು. 'ಶೀಘ್ರಮೇವ ಸುದೃಷ್ಟಿ ಪ್ರಾಪ್ತಿರಸ್ತು'.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಮದ, ಮೋಹ, ಮತ್ಸರ; ಈ ಮೂರು ವೈರಿಗಳಿಂದ ದೂರ ಉಳಿಯುವುದು ಹೇಗೆ?
ಅತಿ ಹಳೆಯ ರಸ್ತೆಯಲ್ಲಿ ಸಾಗುವ ಮೂಲಕ – ಕರ್ಮಣ್ಯೇವಾಧಿಕಾ ರಸ್ತೆ!

ಪಿ.ಜೆ. ರಾಘವೇಂದ್ರ, ಮೈಸೂರು
ಇಲ್ಲೊಬ್ಬ ಕಥೆಗಾರರು ತಮ್ಮ ಮನೆಗೆ ಸಶೇಷ ಎಂದು ಹೆಸರಿಟ್ಟಿದ್ದಾರಲ್ಲಾ?
ಕಂಟ್ರಾಕ್ಟರ್ ಮಹಾಶಯ ಕಂಪ್ಲೀಟ್ ಮಾಡಲೇ ಇಲ್ಲವಂತೆ.

ರಮೇಶ್ ಬೊಂಗಾಳೆ, ಬೈಲಹೊಂಗಲ
ಅನ್ನ ತಿಂದರೆ ಜೀರ್ಣವಾಗುತ್ತದೆ. ಲಂಚ ತಿಂದರೆ?
ಮತ್ತಷ್ಟು ಮಗದಷ್ಟು ಹಸಿವಾಗುತ್ತದೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಓದುಗರ ಪ್ರಶ್ನೆಗಳಿಗೆ ನೀವು ಉತ್ತರಿಸುವಾಗ ನಿಮ್ಮ ಸಮಯ, ತಯಾರಿ ಹೇಗಿರುತ್ತದೆ ರಾಮ್?
ಏರ್ಪಾಡು ಏರುಸ್ವರದಲ್ಲಿರುತ್ತದೆ, ಸಮಯ ರಸಮಯವಾಗಿರುತ್ತದೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಬಿಸಿನೆಸ್ ಮಾಡಬೇಕೆಂದಿದ್ದೇನೆ; ಬರ ಪರಿಹಾರ ಒಳ್ಳೆಯದೋ, ನೆರೆ ಪರಿಹಾರ ಒಳ್ಳೆಯದೋ?
ಕತ್ತಿ ಸಿದ್ಧವಾಗಿದೆ; ಸೋಪು ಹಚ್ಚಿದ್ದಾಗಿದೆ; ಸ್ಟ್ರೈಟು, ರಿವರ್ಸ್ ಎರಡೂ ವಿಧದಲ್ಲಿ ಬೋಳಿಸಿಬಿಡಿ.

ಅನಸೂಯ ಟಿ, ಕೇದಿಗೆಮನೆ
ಪ್ರಾಮಾಣಿಕ ಪ್ರಯತ್ನವಿದ್ದೂ, ಕಠಿಣ ಪರಿಶ್ರಮ ವಹಿಸಿಯೂ ಫಲ ದೊರೆಯದಿದ್ದರೆ ಮುಂದೇನು?
ಎರಡೇ ದಾರಿ; ಕಲ್ಲು ಹೊಡೆದು ಹಣ್ಣುದುರಿಸುವುದು; ಸಿಕ್ಕಿದ್ದನ್ನೇ ಫಲವೆಂದು ತೃಪ್ತಿ ಹೊಂದುವುದು.

ಕೆ.ಸಿ. ಸತ್ಯನಾರಾಯಣ
ಗ್ಯಾರಂಟಿ ಉಚಿತ, ನಿಶ್ಚಿತ, ಖಚಿತ ಎನ್ನುವ ಹಾಸ್ಯಭರಿತ ಚಲನಚಿತ್ರದ ನಿರ್ದೇಶನದ ಸಾರಥ್ಯ ವಹಿಸುವಿರಾ?
ಆಗಬಹುದಿತ್ತು; ಆದರೆ ಐದು ದೃಶ್ಯಗಳ ನಂತರ ಅದು ಫುಲ್ ಲೆಂತ್ ಟ್ರಾಜೆಡಿಯಾದ್ದರಿಂದ.

ಕೆ.ವಿ. ಗೋವಿಂದಾಚಾರಿ, ಮೈಸೂರು
ನರ್ಸಸ್ ಡೇ, ಡಾಕ್ಟರ್ಸ್ ಡೇ ಇದ್ದಂತೆ ಜಡ್ಜಸ್ ಡೇ ಯಾಕಿಲ್ಲ?
ಇತ್ತಂತೆ, ವಕೀಲರು ಅದಕ್ಕೆ ಅನಿರ್ದಿಷ್ಟ ಅವಧಿಯ ಅಡ್ಜರ್ನ್ಮೆಂಟ್ ಪಡೆದರಂತೆ.

ವಿ. ಹೇಮಂತಕುಮಾರ್, ಬೆಂಗಳೂರು
ಮನೆ ಮಾವನ ಹೆಸರಿನಲ್ಲಿದ್ದರೂ ಅತ್ತೆಮನೆ ಎಂದೇ ಹೇಳುತ್ತಾರೇಕೆ?
ನಿರ್ಮಾಣ ವಜ್ರೇಶ್ವರಿ ಕಂಬೈನ್ಸ್ ಆದರೂ ಅಣ್ಣಾವ್ರ ಫಿಲ್ಮ್ ಎಂದೇ ಹೇಳುವುದು.

## ಬಹುಮಾನಿತ ಪ್ರಶ್ನೆ

ಸೀಮಂತಿನಿ ದೇಸಾಯಿ, ಬೆಂಗಳೂರು
ಅಕ್ರಮ ಸಕ್ರಮವಾದಂತೆ ಅನ್ಯಾಯ ನ್ಯಾಯವಾಗಬಹುದೆ?
ನ್ಯಾಯಾಧೀಶರು ಬುಕ್ ಆದರೆ, ಆಗಬಹುದು.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ಅಡೆತಡೆಗಳಿಲ್ಲದ ದಾರಿಗಳಿವೆಯೆ?
ಹೂಂ. ಇಳಿಜಾರು.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಕೂದಲಿಗೆ ಜೀವ ಇದ್ದಿದ್ದರೆ?
ಶೇವ್ ಮಾಡಿಕೊಳ್ಳುವುದಕ್ಕೆ ಮುಂಚೆ ಕೂದಲಿಗೆ ಕ್ಲೋರೋಫಾರಂ ಕೊಡಬೇಕಾಗುತ್ತಿತ್ತು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ರೈತನ ಹತ್ತು ಬೆರಳು ಮಣ್ಣಾದರೆ ಜನರ ಐದು ಬೆರಳು ಉಣ್ಣುತ್ತವೆ. ಇದನ್ನು ರಾಜಕೀಯಕ್ಕೆ ಹೋಲಿಸಿದರೆ?



ಮಂತ್ರಿಯ ಒಂದು ಮಾಲ್ ಏಳಲಿಕ್ಕೆ ಜನರ 50 ಮನೆಗಳು ಉರುಳುತ್ತವೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಕೆಲವರು ಸಾಯುವುದಕ್ಕೆ ಮೊದಲೇ ಭೂಲೋಕದಲ್ಲಿ ನರಕವನ್ನು ಅನುಭವಿಸಲು ಕಾರಣ?
ಅದು ಇವರಿಗೆ ಮುಂದಕ್ಕೆ ಅನುಕೂಲವಾಗಲೆಂದು ಯಮ ನಡೆಸುವ ವೊಕೇಷನಲ್ ಟ್ರೈನಿಂಗ್ ಅಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಜೀವನವೆಲ್ಲಾ ಯೌವನವಾದರೆ ಹೇಗಿರುತ್ತಿತ್ತು?
ಬಾಲಲೀಲೆಗಳೇ ಇಲ್ಲದೆ ಬೋರ್ ಹೊಡೆಯುತ್ತಿತ್ತು.

ಮಂಡಿ ಕುಮಾರ್, ಬೆಂಗಳೂರು
ಸಾವಿನ ಅಂತ್ಯ ಹೇಗಿರುತ್ತದೆ?
ಲವಲವಿಕೆಯಿಂದ. ಹುಟ್ಟೇ ಸಾವಿನ ಅಂತ್ಯ.

■ ರಾಮ್